# ಧರ್ಮೋಪದೇಶ ಮತ್ತು ಬೈಬಲ್ ಆಯೋಗ
## ಬೆಂಗಳೂರು ಮಹಾ ಧರ್ಮಕ್ಷೇತ್ರ
## ಶಾಲಾಮಟ್ಟದ ಧರ್ಮೋಪದೇಶ ಪರೀಕ್ಷೆ 2024-25

ತರಗತಿ: ನಾಲ್ಕನೆಯ ತರಗತಿ **ಪ್ರಶ್ನೆಪತ್ರಿಕೆ** ದಿನಾಂಕ:14.12.2024

ಸಮಯ: 2 ಗಂಟೆಗಳು ಅಂಕಗಳು:60

**I. ಹೊಂದಿಸಿ ಬರೆಯಿರಿ:** **(6x1=6)**

| ಅ | ಆ |
|---|---|
| 1) ಯೇಸು ಕಲಿಸಿದ ಪ್ರಾರ್ಥನೆ | ಬಡವರಿಗೆ ಕರುಣೆ ತೋರಿಸಿದವರು |
| 2) ಇಮ್ಮಾನುವೇಲ್ | ಪಾರಿವಾಳದ ರೂಪ |
| 3) ಮದರ್ ತೆರೇಸ | ಕರ್ತರ ಪ್ರಾರ್ಥನೆ |
| 4) ಯೇಸುಸ್ವಾಮಿ | ಪಾಸ್ಕ ಜಾಗರಣೆ |
| 5) ಯೇಸುವಿನ ಪುನರುತ್ಥಾನ | ದೇವರು ನಮ್ಮೊಡನೆ ಇದ್ದಾರೆ |
| 6) ಪವಿತ್ರಾತ್ಮ | ಅತ್ಯುತ್ತಮ ಮಾರ್ಗದರ್ಶಿ |

**II. ಆವರಣದಲ್ಲಿ ಕೊಟ್ಟಿರುವ ಸರಿಯಾದ ಉತ್ತರವನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ತುಂಬಿರಿ:** **(6x1=6)**

{ಪುನರುತ್ಥಾನದ, ರಬ್ಬಿ, ನಜರೇತ್, ಕ್ಷಮಿಸಬೇಕು, ಗೋಧಿಯ ಕಾಳಿಗೆ, ಪೋಪ್ ಫ್ರಾನ್ಸಿಸ್}

1) ಏಳೆಪ್ಪತ್ತು ಸಲ ಕ್ಷಮಿಸುವುದೆಂದರೆ ನಾವು ಇತರರನ್ನು ಯಾವಾಗಲೂ ____________ ಎಂದರ್ಥ.

2) ಮಾನವ ಜೀವನವನ್ನು ಯೇಸು ಒಂದು ____________ ಹೋಲಿಸಿದರು.

3) ಜೋಸೆಫ್ ಮತ್ತು ಮರಿಯಾ ರವರ ಸ್ವಗ್ರಾಮ ____________.

4) ____________ ಮೂಲಕ ಯೆಸು ಪಾಪ, ಮರಣ ಹಾಗೂ ಕೇಡಿನ ಮೇಲೆ ವಿಜಯವನ್ನು ಸಾಧಿಸಿದರು.

5) ನಮ್ಮ ಇಂದಿನ ಜಗದ್ಗುರುಗಳು ____________.

6) ____________ ಅಂದರೆ ಬೋಧಕ ಎಂದು ಅರ್ಥ.

**III. ಬಿಟ್ಟ ಸ್ಥಳ ತುಂಬಿರಿ:** **(6x1=6)**

1) 'ಇದೆಂಥಹ ಶುಭಾಷಯ' ಎಂದು ____________ ಹೇಳಿದರು.

2) ಯೇಸುಸ್ವಾಮಿಯು ಮೂರು ದಿನಗಳ ನಂತರ ____________ ದೇವಾಲಯದಲ್ಲಿ ಸಿಕ್ಕಿದರು.

3) ____________ ಬಡವರು, ಅಶಿಕ್ಷಿತರು, ಸಮಾರಿಯದವರು ಮತ್ತು ಸ್ತ್ರೀಯರನ್ನು ಕೀಳಾಗಿ ನೋಡುತ್ತಿದ್ದರು.

4) ಲಾಜರ್ ಮತ್ತು ಅವನ ಸಹೋದರಿಯರು____________ಎಂಬ ಊರಿನಲ್ಲಿ ವಾಸಿಸುತ್ತಿದ್ದರು.

5) "ದಯೆ ತೋರಿದವನೇ ____________" ಎಂದು ಯೇಸು ಹೇಳಿದರು.

6) ಯೇಸು ಮರಣ ಹೊಂದಿದ ಮೂರನೆಯ ದಿನ ಕೆಲವು ಹೆಂಗಸರು ಮುಂಜಾವಿನಲ್ಲಿ

__________ ಗಳೊಂದಿಗೆ ಯೇಸುವಿನ ಸಮಾಧಿಯ ಕಡೆಗೆ ಹೋದರು.

**IV. ಕೆಳಗಿನ ವಾಕ್ಯಗಳನ್ನು ಓದಿ ಸರಿ ಅಥವಾ ತಪ್ಪು ಬರೆಯಿರಿ:** **(5x1=5)**

1) ಸತ್ತವರಿಗೆ ಜೀವ ಕೊಡಲು ಯಾರಿಂದಲೂ ಸಾಧ್ಯವಿಲ್ಲ.
2) ಪ್ರಾರ್ಥನೆ ಮಾಡುವಾಗ ಸಮೀಪದಲ್ಲಿರುವವರೊಡನೆ ಮಾತನಾಡಬೇಕು.
3) ಪವಿತ್ರ ಶುಕ್ರವಾರದಂದು ಯೇಸುಸ್ವಾಮಿ ಪರಮಪ್ರಸಾದವನ್ನು ಸ್ಥಾಪಿಸಿದರು.
4) ಎಲ್ಲಾ ವಿದ್ಯಾರ್ಥಿಗಳೊಂದಿಗೆ ಗೆಳೆತನ ಬೆಳೆಸಿಕೊಳ್ಳಬೇಕು.
5) ಯೇಸು ಹನ್ನೆರಡು ಮಂದಿಯನ್ನು ಪ್ರೇಷಿತರನ್ನಾಗಿ ಆಯ್ಕೆ ಮಾಡಿದರು.

**V. ಈ ಮಾತನ್ನು ಯಾರು ಯಾರಿಗೆ ಹೇಳಿದರು? (3 ಕ್ಕೆ ಮಾತ್ರ)** **(3x2=6)**

1) "ದೈವಾನುಗ್ರಹಭರಿತಳೇ ನಿನಗೆ ಶುಭವಾಗಲಿ, ಸರ್ವೇಶ್ವರ ನಿನ್ನೊಡನೆ ಇದ್ದಾರೆ."
2) "ದಯೆ ತೋರಿದವನೇ ನೆರೆಯವನು"
3) "ಪ್ರಭುವೇ, ನೀವು ಇಲ್ಲಿದ್ದಿದ್ದರೆ, ನನ್ನ ಸಹೋದರ ಸಾಯುತ್ತಿರಲಿಲ್ಲ"
4) "ಲಾಜರನೇ ಹೊರಗೆ ಬಾ"

**VI. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ:** **(5x2=10)**

1) ನಿಮ್ಮ ಶಾಲೆಯ ಸಹಪಾಠಿಗಳಿಗೆ ನೀವು ಹೇಗೆ ಸಹಾಯ ಮಾಡಬಹುದು?
2) ಯೇಸು ಪ್ರಾರ್ಥನೆ ಮಾಡಿದ ಸಂದರ್ಭಗಳು ಯಾವುವು?
3) ಯೇಸುವಿನಲ್ಲಿ ಇದ್ದ ಒಳ್ಳೆಯ ಗುಣಗಳು ಯಾವುವು?
4) ಯೇಸು ತಮ್ಮ ಶಿಷ್ಯರ ಕಾಲು ತೊಳೆದರು. ಈ ಬಗ್ಗೆ ನಿನ್ನ ಅಭಿಪ್ರಾಯವೇನು?
5) ಯೇಸು ತಮ್ಮ ಪ್ರೇಷಿತರಿಗೆ ಏಕೆ ತರಬೇತಿ ಕೊಟ್ಟರು?

**VII. ಕೇಳಿರುವ ದೈವವಾಕ್ಯಗಳನ್ನು ಬರೆಯಿರಿ:** **(3x2=6)**

1) ಮತ್ತಾಯ 7:7
2) ಯೊವಾನ್ನ 14: 06
3) ಯೊವಾನ್ನ 15: 13

**VIII. ಕೊಟ್ಟಿರುವುದನ್ನು ಸಂಕ್ಷಿಪ್ತವಾಗಿ ಬರೆಯಿರಿ:** **(3x3=9)**

1) ದೇವರಲ್ಲಿನ ವಿಶ್ವಾಸ
2) ಕ್ಷಮೆಯ ಮಹತ್ವ
3) ಯೇಸುವಿನ ಬಾಲ್ಯಜೀವನ

**IX. ಯಾವುದಾದರೂ ಒಂದು ವಿಷಯವನ್ನು ಆರಿಸಿ ಪ್ರಬಂಧ ಬರೆಯಿರಿ:** **(1x6=6)**

1) ಮದರ್ ತೆರೇಸ
2) ಯೇಸುವಿನ ಶಿಷ್ಯರು

***************